# ಹಣ್ಣುಗಳ ರಾಜನಿಗೂ ರೋಗಗಳು !

**ಅಕ್ಕಮಹಾದೇವಿ ಡಿ. ಅಗಸಿಮನಿ ಮತ್ತು ಯುಸುಫಅಲಿ ನಿಂಬರಗಿ**

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ – ೫೮೩ ೨೩೧

☎: ೦೮೫೩೯– ೨೩೦೨೦೫ **ಮಿಂಚಂಚೆ:** eeukoppal@rediffmail.com



ಹಣ್ಣುಗಳ ರಾಜ ಮಾವು, ನಮ್ಮ ರಾಜ್ಯದ ಪ್ರಮುಖ ಹಣ್ಣಿನ ಬೆಳೆಯಾಗಿದೆ. ಭಾರತ ದೇಶದಲ್ಲಿ ಈ ಹಣ್ಣನ್ನು ೧೫.೨ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದು ೯೬ ಲಕ್ಷ ಮೆಟ್ರಿಕ್ ಟನ್ ಹಣ್ಣುಗಳ ಇಳುವರಿಯನ್ನು ಪಡೆಯಲಾಗುತ್ತದೆ. ನಮ್ಮ ರಾಜ್ಯದಲ್ಲಿ ೧.೩೦ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ೪ ಲಕ್ಷ ಟನ್ ಉತ್ಪಾದನೆಯಾಗುತ್ತಿದೆ.

ಮಾವಿಗೆ ವರ್ಷದ ಎಲ್ಲಾ ಕಾಲಗಳಲ್ಲೂ ರೋಗ ಬಾಧೆ ಕಂಡುಬರುತ್ತಿದ್ದರೂ, ಹೊಸ ಚಿಗುರು, ಹೂವಾಡುವ ಸಮಯ, ಕಾಯಿಕಟ್ಟುವ ಹಂತಗಳಲ್ಲಿ ಕಾಣಿಸಿಕೊಳ್ಳುವ ರೋಗಗಳು ಹೆಚ್ಚು ನಷ್ಟವನ್ನುಂಟುಮಾಡುತ್ತವೆ. ಸಕಾಲದಲ್ಲಿ ಮಾವಿನ ಸಂರಕ್ಷಣೆಗೆ ಸೂಕ್ತ ಕ್ರಮಗಳು ಅವಶ್ಯ.

೧. **ಬೂದಿ ರೋಗ:** ಈ ರೋಗವನ್ನು ಚಳಿಗಾಲದ ಆರಂಭದಿಂದ ಹಿಡಿದು ಬೇಸಿಗೆಯ ಪ್ರಾರಂಭದವರೆಗೂ ಕಾಣಬಹುದು. ಹೂ ಗೊಂಚಲು, ಎಳೆಯ ಕಾಯಿಗಳು ಹಾಗೂ ಎಲೆಗಳ ಬೆಳವಣಿಗೆಯ ಮೇಲೆ ರೋಗದ ಲಕ್ಷಣವನ್ನು ಕಾಣಬಹುದು. ಎಳೆಯ ಎಲೆಗಳು ಹಸಿರು ಬಣ್ಣಕ್ಕೆ ತಿರುಗುವ ಮುನ್ನವೇ ಸೋಂಕು ತಗುಲಿದಾಗ ಅದರ ಆಕಾರ ವಿರೂಪವಾಗಿ ಬೆಳವಣಿಗೆ ಅಸಮರ್ಪಕವಾಗಿ ಕಾಣುತ್ತದೆ. ಎಲೆಗಳ ಮೇಲೆ ಬೂದಿಬಣ್ಣದ ಶಿಲೀಂಧ್ರ ಅಗಲವಾಗಿ ಹರಡಿ, ಕೆಲವೊಮ್ಮೆ ಇಡೀ ಎಲೆಯನ್ನು ಆವರಿಸುತ್ತದೆ. ಹೂ ಗೊಂಚಲು ಇನ್ನೂ ಮೊಗ್ಗಾಗಿದ್ದಾಗ ಅಥವಾ ಆನಂತರ ಸೋಂಕು ತಗುಲಬಹುದು. ಹೂ ಗೊಂಚಲ ಮೇಲೂ ಶಿಲೀಂಧ್ರ ಕಾಣಬಹುದು. ಹೂ ತೊಟ್ಟಿನ ಮೇಲೆ ಸೋಂಕು ತಗುಲಿದಾಗ ಹೂಗಳು ಉದುರುತ್ತವೆ. ರೋಗ ತೀವ್ರವಾದಾಗ ಎಲ್ಲಾ ಹೂ ಹಾಗೂ ಎಳೆಯ ಕಾಯಿಗಳು ಉದುರುತ್ತವೆ.

**ಮಾವಿಗೆ ವರ್ಷದ ಎಲ್ಲಾ ಕಾಲಗಳಲ್ಲೂ ರೋಗ ಬಾಧೆ ಕಂಡುಬರುತ್ತಿದ್ದರೂ, ಹೊಸ ಚಿಗುರು, ಹೂವಾಡುವ ಸಮಯ, ಕಾಯಿಕಟ್ಟುವ ಹಂತಗಳಲ್ಲಿ ಕಾಣಿಸಿಕೊಳ್ಳುವ ರೋಗಗಳು ಹೆಚ್ಚು ನಷ್ಟವನ್ನುಂಟುಮಾಡುತ್ತವೆ. ಸಕಾಲದಲ್ಲಿ ಮಾವಿನ ಸಂರಕ್ಷಣೆಗೆ ಸೂಕ್ತ ಕ್ರಮಗಳು ಅವಶ್ಯ.**

**ನಿರ್ವಹಣೆ:** ಹೂ ಬಿಡುವ ಮುಂಚೆ ಹಾಗೂ ಕಾಯಿಕಟ್ಟಿದ ಕೂಡಲೇ ೩ ಗ್ರಾಂ. ಗಂಧಕ ಅಥವಾ ೧ ಗ್ರಾಂ. ಟ್ರೈಡಿಮೆಫಾನ್ ೫೦ ಡಬ್ಲ್ಯೂಪಿ ಅಥವಾ ೨ ಗ್ರಾಂ. ಕಾರ್ಬನ್‌ಡೈಜಿಮ್ ೫೦ ಡಬ್ಲ್ಯೂಪಿ ಅಥವಾ ೧ ಮಿಲೀ. ಹೆಕ್ಸಾಕೋನೋಜೋಲ್ ೫ ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪರಣೆ ಮಾಡಬೇಕು. ಅವಶ್ಯವಿದ್ದಲ್ಲಿ ಇದೇ ಸಿಂಪರಣೆಯನ್ನು ೧೦–೧೫ ದಿನಕ್ಕೊಮ್ಮೆ ಪುನರಾವರ್ತಿಸಬಹುದು.

೨. **ಚಿಬ್ಬು ರೋಗ (ಅಂಥ್ರಾಕ್‌ನೋಸ್):** ಸಸಿಗಳ ಮತ್ತು ಮರಗಳ ಎಳೆಯ ಎಲೆಗಳ ಮೇಲೆ ಕಂದುಬಣ್ಣದ

ಚುಕ್ಕೆಗಳು ಕಂಡುಬಂದು ವೃದ್ಧಿಯಾಗಿ ಎಲೆ ಒಣಗುವಂತೆ ಮಾಡುತ್ತದೆ. ಚುಕ್ಕೆಗಳು ಹೆಚ್ಚಾದಾಗ ಎಲೆಗಳು ವಿಕಾರಗೊಳ್ಳುತ್ತವೆ. ಇತರೆ ಭಾಗಗಳ ಮೇಲೆ ಕಪ್ಪುಚುಕ್ಕಿ ಉದ್ಭವಾಗಿ ನಡುವಿನ ಭಾಗ ಒಳಕುಸಿದು ಸುಳಿ ಸಾಯುತ್ತದೆ. ಹಿಮ್ಮುಗವಾಗಿ ಸುಳಿಗಳು ಸಾಯುವುದು ಈ ರೋಗದ ಪ್ರಮುಖ ಲಕ್ಷಣ. ಹೂ ತೊಟ್ಟು ಮತ್ತು ಕಾಯಿಗಳ ಮೇಲೆ ರೋಗ ಕಂಡುಬಂದಾಗ ಅವು ಉದುರುತ್ತವೆ.



ಬಲಿತ ಕಾಯಿಗಳು ಮಾಗುವ ಸಂದರ್ಭದಲ್ಲಿ ಚುಕ್ಕೆಗಳು ಕಂಡುಬಂದರೆ ಹಣ್ಣು ಕೊಳೆಯಲು ಆರಂಭವಾಗುತ್ತದೆ. ರಫ್ತು ಮಾಡುವ ಹಣ್ಣುಗಳು ಈ ಬಗೆಯ ರೋಗದಿಂದ ಹೆಚ್ಚು ಹಾನಿಗೊಳಗಾಗುತ್ತವೆ.

**ನಿರ್ವಹಣೆ:** ಈ ರೋಗದ ಹತೋಟಿಗೆ ಶೇ.೧ ರ ಬೋರ್ಡೋ ಮಿಶ್ರಣ ಇಲ್ಲವೆ ಪ್ರತಿ ಲೀಟರ್ ನೀರಿನಲ್ಲಿ ೧ ಗ್ರಾಂ. ಕಾರ್ಬೆನ್‌ಡೈಜಿವ್ ೫೦ ಡಬ್ಲೂಪಿ ಅಥವಾ ೧ ಗ್ರಾಂ. ಮಿಥೈಲ್ ಥಯೋಫಿನೇಟ್ ಶೇ.೭೦ ಕರಗಿಸಿ ಸಿಂಪರಣೆ ಮಾಡಬೇಕು. ರೋಗದ ತೀವ್ರತೆ ಕಂಡುಬಂದಲ್ಲಿ ೧೦-೧೫ ದಿನಕ್ಕೊಮ್ಮೆ ಸಿಂಪರಣೆಯನ್ನು ಪುನರಾವರ್ತಿಸಬೇಕು.

**೩. ದುಂಡಾಣು ಎಲೆ ಚುಕ್ಕೆರೋಗ:** ಎಲೆಗಳ ಮೇಲೆ ಕಂದು ಬಣ್ಣದ ಚುಕ್ಕೆಗಳು ಕಂಡುಬಂದು ಅವುಗಳ ಸುತ್ತಲು ಹಳದಿ ಉಂಗುರದ ಚಿನ್ಹೆ ಇರುತ್ತದೆ. ಎಳೆಕಾಯಿ ಹಾಗೂ ಬಲಿತ ಮಾವಿನ ಕಾಯಿಗಳಲ್ಲಿ ಆಳವಾದ ಕಂದು ಅಥವಾ ಕಪ್ಪು ಚುಕ್ಕೆಗಳು ಕಂಡುಬರುತ್ತವೆ.

**ನಿರ್ವಹಣೆ:** ಈ ರೋಗದ ಹತೋಟಿಗೆ ಸ್ಟ್ರೆಪ್ಟೋಮೈಸಿನ್ ಸಲ್ಫೇಟ್ ೨೦೦ ಪಿ.ಪಿ.ಎಂ ಅಂದರೆ ೨ ಗ್ರಾಂ. ಸ್ಟ್ರೆಪ್ಟೋಮೈಸಿನ್ ಸಲ್ಫೇಟ್‌ನ್ನು ೧೦ ಲೀಟರ್ ನೀರಿನಲ್ಲಿ ಕರಗಿಸಿ ಸಿಂಪರಣೆ ಮಾಡಬೇಕು.

**೪. ಹೂ ಅಂಗಮಾರಿ ರೋಗ (ಬ್ಲಾಸಮ್ ಬ್ಲೈಟ್):** ಹೂ ಗೊಂಚಲುಗಳಲ್ಲಿ ಹೂವಿನ ಮೇಲೆ ಕಪ್ಪು ಚುಕ್ಕೆಗಳು ಕಂಡುಬಂದು ಹೂಗಳು ಉದುರಲು ಪ್ರಾಂಭಿಸುತ್ತವೆ. ಅಷ್ಟೇ ಅಲ್ಲದೆ ಕಾಯಿಗಳು ಹಿಡಿಯುವುದಿಲ್ಲ.

**ನಿರ್ವಹಣೆ:** ಈ ರೋಗದ ಹತೋಟಿಗೆ ೨ ಗ್ರಾಂ. ಮ್ಯಾಂಕೋಜೆಬ್ ೭೫ ಡಬ್ಲೂಪಿ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಇಬ್ಬನಿ ಬಿದ್ದ ದಿನವೇ ಹೂ ಗೊನೆಗಳಿಗೆ ಚೆನ್ನಾಗಿ ಸಿಂಪರಣೆ ಮಾಡಬೇಕು ಹಾಗೂ ಈ ಹೂ ಬಿಡುವ ಸಮಯದಲ್ಲಿ ಮತ್ತೆ ಇಬ್ಬನಿ ಬಿದ್ದಲ್ಲಿ ಅದೇ ದಿನ ಈ ಸಿಂಪರಣೆಯನ್ನು ಕೈಗೊಳ್ಳಬೇಕು.

****

## ಚಂದಾದಾರರ ಗಮನಕ್ಕೆ

**ಜನವರಿ-೨೦೧೩ ರ ಕೊನೆಗೆ ಚಂದಾ ಅವಧಿ ಕೊನೆಗೊಳ್ಳುವ ಸದಸ್ಯರು ತಮ್ಮ ಸದಸ್ಯತ್ವವನ್ನು ನವೀಕರಿಸಲು ಕೋರಿದೆ. ಕೃಷಿ ಮುನ್ನಡೆ ಪತ್ರಿಕೆಯೊಂದಿಗೆ ವ್ಯವಹರಿಸುವಾಗ ತಮ್ಮ ಚಂದಾ ಹಾಗೂ ಪೋನ್ ಸಂಖ್ಯೆಯನ್ನು ತಪ್ಪದೇ ನಮೂದಿಸಬೇಕು. ಮಿಂಚಂಚೆ ವಿಳಾಸ ತಿಳಿಸಿದಲ್ಲಿ ಅನುಕೂಲ. ಪತ್ರಿಕೆಗೆ ಬರೆಯುವ ಎಲ್ಲ ಲೇಖಕರು ಚಂದಾದಾರರಾಗಿರುವುದು ಅವಶ್ಯವಿದೆ.**
**ಚಂದಾ ಹಣವನ್ನು ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಮನಿಆರ್ಡರ ಸ್ವೀಕರಿಸುವುದಿಲ್ಲ.**